3. ನಿಯಮ 69ರ ಮೇರೆಗೆ ಚರ್ಚೆ:

ವಿಷಯ: ಕರ್ನಾಟಕ ರಾಜ್ಯದಲ್ಲಿರುವ ಸ್ವಯಂ ಸೇವಾ ಸಂಸ್ಥೆಗಳ ಬಗ್ಗೆ

ಶ್ರೀ ಕೆ.ಆರ್.ರಮೇಶ್ ಕುಮಾರ್(ಶ್ರೀನಿವಾಸಪುರ) : ಮಾನ್ಯ ಉಪಾಧ್ಯಕ್ಷರೆ, ಜುಲೈ 1ನೇ ತಾರೀಖಿನ The Times of India ಪತ್ರಿಕೆಯ front page ನಲ್ಲಿ ಒಂದು article ಇದೆ. ಭಾರತ ದೇಶಕ್ಕೆ 2006–07ನೇ ಸಾಲಿನಿಂದ ಈಚೆಗೆ ಪ್ರತಿ ವರ್ಷ 10 ಸಾವಿರದಿಂದ 11 ಸಾವಿರ ಕೋಟಿ ರೂಪಾಯಿಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿದೇಶಿ ದೇಣಿಗೆ ಹರಿದು ಬರುತ್ತಿದೆ. ಇದರ ಪೈಕಿ ಕರ್ನಾಟಕ ರಾಜ್ಯಕ್ಕೆ ಸ್ವಲ್ಪ ಹೆಚ್ಚು ಕಡಿಮೆ 1,069 ಕೋಟಿ ರೂಪಾಯಿ ಬರುತ್ತಿದೆ ಎನ್ನುವ ವಿಚಾರ ಅದರಲ್ಲಿ ಪ್ರಸ್ತಾಪವಾಗಿದೆ. ಈ ವರ್ತಮಾನ ಬರುವುದಕ್ಕೆ ಅವರಿಗೆ ಆಧಾರ ಅಂದರೆ, source of information ಯಾವುದೆಂದರೆ, Ministry of Home Affairs, Government of India, ಮತ್ತೆ IB Report ಆಗಿದೆ. ನಮ್ಮ ಆತಂಕ ಏನೆಂದರೆ, 1,069 ಕೋಟಿ ರೂಪಾಯಿ ಕರ್ನಾಟಕ ರಾಜ್ಯಕ್ಕೆ ಬರುತ್ತಿದೆ ಎಂದರೆ ಇದನ್ನು ಯಾರು ಪಡೆದು ಕೊಳ್ಳುತ್ತಿದ್ದಾರೆ? ಯಾವ್ಯಾವುದಕ್ಕೆ ಈ ಹಣವನ್ನು ಉಪಯೋಗಿಸಿದ್ದಾರೆ? ಅಲ್ಲಿಂದ ಬಂದ ಹಣಕ್ಕೆ ಇವರು ಲೆಕ್ಕ ಕೊಟ್ಟಿದ್ದಾರೆಯೇ? ಲೆಕ್ಕ ಕೊಡದೆ ಹೋದರೆ ಆ ವಿಚಾರದಲ್ಲಿ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರ ಏನು ಪ್ರಯತ್ನ ಮಾಡಿದೆ? ಏಕೆಂದರೆ ವಿದೇಶಿ ಹಣ ನಮ್ಮ ರಾಜ್ಯಕ್ಕೆ ಬಂದಿದೆ. Emily Burns ಎನ್ನುವಂಥವನು ಒಬ್ಬ ಮಹಾನ್ ಪಂಡಿತ ಆಗಿದ್ದ. ಆತ ಕಮ್ಯುನಿಸ್ಟ್ ಸಿದ್ಧಾಂತವನ್ನು ಪ್ರಚುರಪಡಿಸತಕ್ಕಂಥ ಒಬ್ಬ ಮಹಾನ್ ವಿದ್ವಾನ್ ಆಗಿದ್ದ.

(ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಮಾನ್ಯ ಅಧ್ಯಕ್ಷರೆ, ತಾವು ಕೋಟ್ ಹಾಕಿಕೊಂಡು ಬಂದ ಶೈಲಿ ನೋಡಿದರೆ ಆ ವಿದೇಶಿ ಹಣ ನಿಮಗೂ ಎಲ್ಲೋ ಬಂದಿದೆ ಎನ್ನುವ ರೀತಿಯಲ್ಲಿ ಬಂದಿರಿ.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದಂಥ ವಿಚಾರವನ್ನು ಮಾನ್ಯ ರಮೇಶ್ ಕುಮಾರ್‌ರವರು ಪ್ರಸ್ತಾಪ ಮಾಡುತ್ತಿದ್ದಾರೆ. ಇದನ್ನು ಕೇಳುವವರು ಯಾರು?

ಶ್ರೀ ಕೆ.ಆರ್.ರಮೇಶ್ ಕುಮಾರ್ : ಸರ್ಕಾರದ ಪರವಾಗಿ ಯಾರೋ ಒಬ್ಬರು ಇದ್ದಾರೆ. No problem.

ಅಧ್ಯಕ್ಷರು : 1, 2, 3 ಸಚಿವರು ಇದ್ದಾರಲ್ಲಾ.

ಶ್ರೀ ಕೆ.ಜಿ.ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರ ವಾದಂಥ ವಿಚಾರವಾಗಿದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮುರ್ನಾಲ್ಕು ದಿವಸಗಳಿಂದ ಈ ವಿಚಾರ ಡೆಫರ್ ಆಗಿತ್ತು.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ : ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳಾಗಲಿ ಮತ್ತು ಮಾನ್ಯ ಸಚಿವರಾಗಲಿ ಒಬ್ಬರೂ ಕೂಡ ಇಲ್ಲ. ಈಗ ಮಾಧ್ಯಮ ಸ್ನೇಹಿತರ ಮೂಲಕ ಮಾನ್ಯ ಮಂತ್ರಿಗಳು ಮತ್ತು ಅಧಿಕಾರಿಗಳು ವೀಕ್ಷಣೆ ಮಾಡಬೇಕಾಗಿದೆಯಷ್ಟೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ನಿನ್ನೆ ದಿವಸ ನಾನು ಚರ್ಚೆ ಮಾಡುತ್ತೇನೆಂದು Home Minister ಆದ George ಅವರು wait ಮಾಡುತ್ತಿದ್ದರು. ಇವತ್ತು reach ಆಗುತ್ತದೆಂದು ಅವರಿಗೆ ಹೇಗೆ ಗೊತ್ತಾಗಬೇಕು?

ಅಧ್ಯಕ್ಷರು : ಈಗ ಸದನದ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ದಯವಿಟ್ಟು ಈ ಸದನವನ್ನು ನಿರ್ಲಕ್ಷ್ಯ ಮಾಡ ಬೇಡಿ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ವಿದೇಶಿ ದೇಣಿಗೆ ಬಂದಿರುವ ಸಂಬಂಧಪಟ್ಟಂತೆ ಮಾತನಾಡುತ್ತಿದ್ದೆ. ತಾವು ಛೇಂಬರ್ ನಲ್ಲಿ ಕೇಳಿಸಿಕೊಂಡಿರಬಹುದು. ನಾನು Emily Burns ವಿಚಾರ ಹೇಳುತ್ತಿದ್ದೆ.

ಆತ Dialectical Materialism ಎಂಬ chapter ಚರ್ಚೆ ಮಾಡು ವಾಗ ಏನು ಹೇಳುತ್ತಾನೆ ಎಂದರೆ ನಾಯಕತ್ವದಲ್ಲಿ ಮೂರು ರೀತಿ ಇರುತ್ತ ದೆಯೆಂತೆ.

ಅಧ್ಯಕ್ಷರು : ನೀವು ಈಗ ಎಲ್ಲಿಗೆ ಹೋಗಿಬಿಟ್ಟಿರಿ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ತಾವು ಎಲ್ಲಾ ಗೊತ್ತಿದ್ದವರು. ಈಚೆಗೆ ವಿಚಾರ ಬರಬೇಕಲ್ಲಾ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ರಮೇಶ್ ಕುಮಾರ್‌ರವರೆ ಒಂದೇ ಒಂದು ವಿನಂತಿ. ನೀವು ಒಂದು ಗಂಭೀರವಾದಂಥ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ತಾವು ನಿನ್ನೆ ಸಚಿವರು ಕಾದರು ಎಂದು ಉಲ್ಲೇಖ ಮಾಡಿದಿರಿ. ಈ ವಿಷಯಕ್ಕೆ ಒಂದು ಗಂಭೀರತೆ ಮತ್ತು ಪ್ರಾಮುಖ್ಯತೆ ಬರ ಬೇಕೆಂದರೆ ಹಿರಿಯ ಸಚಿವರುಗಳು ಇರುವುದು ಅತ್ಯಂತ ಸೂಕ್ತ. ಇವತ್ತು ಎರಡು ನಿಯಮ–69ರ ಅಡಿಯಲ್ಲಿ ಬರುವ ವಿಷಯವನ್ನು ನಾಳೆಗೆ ಮುಂದೂಡಿದ್ದಾರೆ. ತಾವು ಒಪ್ಪಿದರೆ ಪ್ರಸ್ತಾಪ ಮಾಡಿ ನನ್ನದೇನೂ ಇಲ್ಲ. ಆ ಗಂಭೀರತೆ ಸರ್ಕಾರಕ್ಕೆ ಹೋಗಿ ಮುಟ್ಟಬೇಕು. ಅಧಿಕಾರಿ ವರ್ಗ ನೋಡಿ ಅಲ್ಲಿ ಯಾರಿದ್ದಾರೆ. ನಾವು ನೀವು ಮಾತನಾಡಿದ್ದು ಉಳಿಯುತ್ತದೆ ಅಷ್ಟೆ. ಸರ್ಕಾರಕ್ಕೆ ಎಲ್ಲಿ ಅದು ಹೋಗಿ ಮುಟ್ಟಬೇಕು ಅಲ್ಲಿ ಮುಟ್ಟುವುದಿಲ್ಲ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ನೀವು ಹೇಳಿರುವುದನ್ನು ನಾನು ಒಪ್ಪುತ್ತೇನೆ. ನಿನ್ನೆ Home Minister ನನ್ನ ಜೊತೆಯಲ್ಲಿ ಚರ್ಚೆ ಮಾಡಿ wait ಮಾಡುತ್ತಾ ಕುಳಿತಿದ್ದರು. ನಮ್ಮ ಕಲಾಪ ಯಾವ ರೀತಿ ಹೋಯಿತು ಎಂದರೆ ಅದು reach ಆಗಲಿಲ್ಲ. ಇವತ್ತು ಕೂಡ ಬಸವರಾಜ ಬೊಮ್ಮಾಯಿಯವರು ತಮ್ಮ ಭಾಷಣವನ್ನು ಮೊಟಕುಗೊಳಿಸಿದರು. ಈ ವಿಷಯ ಮೂರು ದಿವಸ ದಿಂದ everyday repeat ಆಗುತ್ತಿದೆ. ಹಾಗಾಗಿ ಈಗ ಬಂದಿದೆ ಮಾನ್ಯ ರಾಮಲಿಂಗಾರೆಡ್ಡಿಯವರು Senior Minister ಇದ್ದಾರೆ, ತಿಳಿಸುತ್ತಾರೆ. ಏನಾ ದರೂ ಹೆಚ್ಚು ಕಡಿಮೆ ಆದರೆ ನೀವೆಲ್ಲರೂ ಇದ್ದೀರಲ್ಲಾ ಸರ್ಕಾರಕ್ಕೆ ಸೀರಿಯ ಸ್ಸಾಗಿ ಹೇಳಬಹುದು. ಅದಕ್ಕೆ ಏನೂ ದೊಡ್ಡ ತೊಂದರೆ ಇಲ್ಲ. ಈ ಮೂರು ವಿಧದ ನಾಯಕತ್ವದಲ್ಲಿ ಒಂದು ಸಮಕಾಲೀನ ಸಮಾಜದಲ್ಲಿ ಕೆಲವು ಸಮಸ್ಯೆ

ಗಳು ಉದ್ಭವ ಆದಾಗ ಜನ ಅದರ ಬಗ್ಗೆ ಆಲೋಚನೆ ಮಾಡಿ ಒಂದು ಹೋರಾಟ ತಾನೆ ತಾನಾಗಿ ಉದ್ಭವ ಆದಾಗ ಆ ಹೋರಾಟದ ಮುಖಾಂತರ ಒಂದು ನಾಯಕತ್ವ ಹೊರಗೆ ಬರುತ್ತದೆ. ಅವನಿಗೆ he is a product of the movement ಎಂದು ಹೇಳುತ್ತೇವೆ. ಇನ್ನು ಕೆಲವರು ತಮಗೋಸ್ಕರ ಒಂದು ಹೋರಾಟವನ್ನು ಹುಟ್ಟುಹಾಕುತ್ತಾರೆ. ಯಾವುದೋ ಒಂದು urgent ವಿಚಾರ ನನಗೆ ಯಾವುದೋ ಒಂದು leadership ಬೇಕು, ನನ್ನ personal interest ಗೆ, but I am tactful enough to create a movement. ಅದು self-styled movement. ಮೂರನೆಯದು ಯಾವುದು ಎಂದರೆ ತನ್ನಷ್ಟಕ್ಕೆ ತಾನೆ ಒಂದು situation create ಆದರೆ ಅಲ್ಲಿ ready ಆಗಿ ಹೋಗಿ photo ತೆಗೆಸಿ ಕೊಳ್ಳುವಂಥದ್ದು opportunistic leadership. ನಮಗೆ ಇವರು ಯಾರು ಈ NGOs leaders, opportunistic leaders, self-styled leaders ಅಥವಾ ಯಾವುದಾದರೂ ಒಂದು ಹೋರಾಟದ ಪ್ರಯುಕ್ತ ಹೊರಹೊಮ್ಮಿದ ನಾಯಕರಾ ಇವರು?

ಅಧ್ಯಕ್ಷರು : ವಿಷಯ ಏನ್ರಿ ಮಾರಾಯರೆ?

ಶ್ರೀ ಕೆ.ಆರ್.ರಮೇಶ್ ಕುಮಾರ್ : ಸರ್, ನೀವು ಆತುರಪಟ್ಟು ಬೇರೆ ಎಲ್ಲಾ ಮಾಡಿದಂತೆ ಮಾಡಿದರೆ ನಾನು ಏನು ಹೇಳಲಿ. ಸ್ವಲ್ಪ ತಾಳ್ಮೆಯನ್ನು ಇಟ್ಟುಕೊಳ್ಳಿ. ನಾನು ಎಲ್ಲಾ ಹೇಳುತ್ತಿದ್ದೇನೆ.

ಶ್ರೀ ಕೆ.ಜಿ.ಬೋಪಯ್ಯ : ವಿದೇಶಿ ಹಣ ತೆಗೆದುಕೊಂಡು ಇಲ್ಲಿ ಏನು ಕಾಟ ಕೊಡುತ್ತಿದ್ದಾರೆನ್ನುವುದು ಎಲ್ಲರಿಗೂ ಗೊತ್ತಿದೆ.

ಅಧ್ಯಕ್ಷರು : ಆಯಿತು ಹೇಳಿ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಈಗ ನಮ್ಮ ದೇಶದಲ್ಲಿ ದೇಶಭಕ್ತರಲ್ಲಿಯೂ ಕೂಡ ಎರಡು–ಮೂರು ರೀತಿಯಲ್ಲಿ ದೇಶಭಕ್ತರು ಇದ್ದಾರೆ. ದೇಶಕ್ಕಾಗಿ ಹೋರಾಟ ಮಾಡಿ ಪ್ರಾಣ ಕಳೆದುಕೊಳ್ಳತಕ್ಕಂಥವರು ಒಂದು ರೀತಿಯ ದೇಶಭಕ್ತರು. ಭಾರತ ಮಾತೆಗೆ ವಯಸ್ಸು ಜಾಸ್ತಿಯಾಗಿ ಬಿಟ್ಟಿದೆ, ಶಕ್ತಿ ಇಲ್ಲ ಬಗ್ಗಿಹೋಗಿ ಬಿಟ್ಟಿದ್ದಾಳೆಂದು ಇಲ್ಲಿರುವ ಒಡವೆ, ದುಡ್ಡು, ಬಂಗಾರ,

ಎಲ್ಲಾ ಇಲ್ಲಿ ಇಟ್ಟರೆ ಭಾರತ ಮಾತೆ ಹೊರಲಾರಳು ಎಂದು ಹೇಳಿ ವಿದೇಶಿ ಬ್ಯಾಂಕ್‌ಗಳಲ್ಲಿ ತೆಗೆದುಕೊಂಡು ಹೋಗಿ ಇಡತಕ್ಕಂಥ ದೇಶಭಕ್ತರು ಕೆಲವರು ಇದ್ದಾರೆ. ಈ ದೇಶದಲ್ಲಿ ಕಷ್ಟ ಎಲ್ಲಾ ನಿವಾರಿಸಬೇಕೆಂದು ಹೊರದೇಶಕ್ಕೆ ಹೋಗಿ ದುಡ್ಡು ತೆಗೆದುಕೊಂಡು ಬರುವಂಥವರು ಇದ್ದಾರೆ. ಮೂರು variety ದೇಶಭಕ್ತರು ಮೂರು variety ನಾಯಕರು. ಕರ್ನಾಟಕ 5ನೇ ಸ್ಥಾನದಲ್ಲಿ ಇದ್ದದ್ದು 4ನೇ ಸ್ಥಾನಕ್ಕೆ ಬರುತ್ತದೆ. ಮಹಾರಾಷ್ಟ್ರವನ್ನು ಹಿಂದಕ್ಕೆ ಸರಿಸಿ ಬರುತ್ತಾರೆ. ಇವರ ಇತಿಹಾಸ ಹೇಳಬೇಕೆಂದರೆ, NGO ಎಂದರೆ ಪಾರದರ್ಶಕತೆ ಇರಬೇಕು. ಇವರು Foreign Currency Regulation Act (FCRA) ಕೆಳಗೆ 1976 ನಲ್ಲಿ Parliament ಏನು ಪಾಸ್ ಮಾಡಿದೆ, ಅದರ ಪ್ರಕಾರ ಇವರು ಕೆಲಸ ಮಾಡಬೇಕು. ಈ ಶಾಸನವನ್ನು 2010 ರಲ್ಲಿ Parliament update ಮಾಡುತ್ತೆ, review ಮಾಡುತ್ತೆ ಕೆಲವು ಅನುಭವಗಳು ಆದ ಮೇಲೆ ಮಾಡುತ್ತದೆ. ನಮಗೆ ಈ ಪತ್ರಿಕೆಯಲ್ಲಿ ಬಂದಿರತಕ್ಕಂಥ ವರ್ತಮಾನದ ಪ್ರಕಾರವೇ Intelligence Bureau ಯಾರಿದ್ದಾರೆ, R.A.W ಅವರು ಕೊಟ್ಟಿರುವ ವರದಿ ಬೆಂಗಳೂರಿನಲ್ಲಿರತಕ್ಕಂಥ Bangalore based I.T. companies ಇವರು I.T. waste generate ಮಾಡುತ್ತಾರೆಂದು ಹೇಳಿ ಇವುಗಳನ್ನು ಮುಚ್ಚಬೇಕೆಂದು ಒಂದು movement ಮಾಡುತ್ತಾರೆ. ಆದರೆ ಬಹುರಾಷ್ಟ್ರೀಯ ಕಂಪನಿಗಳಿಂದ ಹಣ ತೆಗೆದುಕೊಂಡು ಬಂದಿರತಕ್ಕಂಥ CISCO, IBM, DELL ಇವರ ವಿರುದ್ಧ ಅವರು ಮಾತನಾಡುವುದಲ್ಲ. ಅವರು ವಾಸ್ತವವಾಗಿ Bangalore based I.T. industries ಗಿಂತ ಕೂಡ ಹೆಚ್ಚು e-waste ನ್ನು generate ಮಾಡುತ್ತಾರೆ. ಪಾಶ್ಚಿಮಾತ್ಯ ಮತ್ತು ಅಮೇರಿಕಾ ದೇಶದವರು ಅವರೇ ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದರೆ 10,000 ಕೋಟಿ ರೂ.ಗಳನ್ನು ಇಲ್ಲಿ ಕಳುಹಿಸುತ್ತಾರೆ. ಅವರಿಗೆ ನಮ್ಮ ಮೇಲೆ ಎಷ್ಟು ಪ್ರೀತಿ ನೋಡಿ. ಇವರು ಇಲ್ಲಿ ಅದನ್ನು ಏಕೆ ಉಪಯೋಗಿಸುತ್ತಿದ್ದಾರೆ. ನಮ್ಮ ಹುಡುಗರು ತಯಾರು ಮಾಡಿರತಕ್ಕಂಥ ಕಂಪನಿ ನಮ್ಮ ಮಕ್ಕಳು ನಡೆಸತಕ್ಕಂಥ ಕಂಪನಿಗಳನ್ನು ಮುಚ್ಚಬೇಕೆಂದು agitation ಮಾಡುತ್ತಾರೆ. Kudankulam ಅಂತ ಒಂದು Projectಗೆ ಬೆಳಗ್ಗೆ ಹೋರಾಟ ಪ್ರಾರಂಭ ಮಾಡುತ್ತಾರೆ. ಅಮೇರಿಕನ್ ಬ್ಯಾಂಕಿನಿಂದ ಸಾಯಂಕಾಲದ ಹೊತ್ತಿಗೆ ಪ್ರಮುಖ

ಹೋರಾಟಗಾರನ ಲೆಕ್ಕಕ್ಕೆ 40,000 ಡಾಲರ್‌ಗಳು ಹಣ ಜಮಾ ಆಗುತ್ತದೆ. ಇವರ Section 8 ಪ್ರಕಾರ Section is of FCRA ಪ್ರಕಾರ ಹಣ ಹೇಗೆ ವ್ಯವ ಹಾರ ಮಾಡಬೇಕೆಂದು ನಿರ್ಬಂಧ ಇದೆ. ಅವರ ಖಾತೆಗೆ ಬಂದಿರುವ foreign ಹಣವನ್ನು Indian bank account ಗೆ ಹಾಕುವುದಕ್ಕೆ ಬರುವುದಿಲ್ಲ. Chartered Accountant certify ಮಾಡಲೇಬೇಕು. ಹಾಕುವುದಕ್ಕೆ ಬರುವುದಿಲ್ಲ. Chartered Accountant certify ಮಾಡಲೇಬೇಕು. chartered Accounts ಏನು certify ಮಾಡಿದ್ದಾರೆ, ಏನೆಲ್ಲಾ ಇವರು ತಪ್ಪುಗಳನ್ನು ಮಾಡಿದ್ದಾರೆಂದು ಹೇಳಿದ್ದಾರೆ, ಒಬ್ಬನೂ ತಿದ್ದಿಕೊಂಡಿಲ್ಲ, ಲೆಕ್ಕವೇ ಕೊಡುವುದಿಲ್ಲ. ನೀವು ಸಭಾಧ್ಯಕ್ಷರಾಗಿದ್ದೀರಿ. ನೀವು ಜೂನ್-30ನೇ ತಾರೀಖಿನೊಳಗೆ ಲೋಕಾಯು ಕ್ತರಿಗೆ ಲೆಕ್ಕವನ್ನು ಕೊಡದೆ ಹೋದರೆ ಈ ಮಾಧ್ಯಮದವರು ನಿಮ್ಮನ್ನು ಬಿಡುತ್ತಾರಾ? ಹರಾಜು ಹಾಕಿಬಿಡುತ್ತಾರೆ. ಇವರು NGOs 1069 ಕೋಟಿ. ರೂ.ಗಳನ್ನು ಅಲ್ಲಿಂದ ತೆಗೆದುಕೊಂಡು ಬಂದು ಇವರು ಲೆಕ್ಕ ಕೊಟ್ಟರಾ, ಕೊಡಲಿಲ್ಲವೇ ಎನ್ನುವುದನ್ನು ಯಾರೂ ಕೇಳುವಂಗಿಲ್ಲ. FCRAನ್ನು violate ಮಾಡುತ್ತಾರೆ. FERA ನ್ನು violate ಮಾಡುತ್ತಾರೆ. ನಿನ್ನೆ ನೀವು ಬಿಜಾಪುರದ Energy Plant ಬಗ್ಗೆ ವಿಚಾರ ಮಾತನಾಡುತ್ತಿದ್ದೀರಿ. ರೈತರ ಮೇಲೆ ಗೋಲಿ ಬಾರ್. ರೈತರಿಗೆ ತೊಂದರೆ ಇದ್ದರೆ ರೈತ ಅಷ್ಟು ತಿಳುವಳಿಕೆಯಸ್ಥ ಆಗಿದ್ದರೆ ರೈತರಿಗೆ ಅಲ್ಲಿ ಅನ್ಯಾಯವಾಗುತ್ತದೆಂದರೆ, ಅದನ್ನು ಮಾಡಿ ಎಂದು ನಾವು ಎಂದು ಹೇಳುವುದಿಲ್ಲ. ಆದರೆ ಯಾರು ಇದನ್ನು ಹುಟ್ಟು ಹಾಕುವವರು. ಯಾರು ಈ ವಿಜ್ಞಾನಿಗಳು ಇವರಿಗೆ ಪ್ರೀತಿ ಎಲ್ಲಿ ಉಕ್ಕಿ ಬಂದು ಬಿಡುತ್ತದೆ. Hydel Project ಮಾಡಬೇಕೆಂದರೆ ಹೋರಾಟ, Nuclear Plant ಮಾಡಬೇಕು ಹೋರಾಟ, ನೀರಾವರಿ project ತೆಗೆದುಕೊಳ್ಳಬೇಕು ಹೋರಾಟ environment ರಸ್ತೆ ಮಾಡಬೇಕು ಎಂದರೆ ಹೋರಾಟ ಇವರು ಇದಕ್ಕೆ ದುಡ್ಡು ಎಲ್ಲಿಂದ ತರುವುದು ಇವರು ವಿದೇಶದಿಂದ. ನಾವು ಅವರ ಲೆಕ್ಕ ವಿಚಾರಿಸು ವಂತಿಲ್ಲ. ಅವರದು ಇದರ ಮೇಲೆ ಅವರು ದೇಶಪ್ರೇಮಿಗಳು. ವಿದೇಶದಿಂದ ದುಡ್ಡು ತೆಗೆದುಕೊಂಡು ಬಂದು ಲೆಕ್ಕ ಕೊಡದೆ ಇರತಕ್ಕಂಥವರು ನಾವು ನೀವೆಲ್ಲಾ ದೇಶದ್ರೋಹಿಗಳು. Internal Security Department (ISD) ಎಂದು

ಇದೆ ಒಂದು ರಾಜ್ಯ ಸರ್ಕಾರದಲ್ಲಿ. ಜರ್ಮನಿ ದೇಶದಿಂದ hand written maps ಕರ್ನಾಟಕದಲ್ಲಿ ಎಲ್ಲೆಲ್ಲಿ Nuclear Plants ಬರುವುದಕ್ಕೆ proposal ಇದೆ. Uranium ಎಲ್ಲೆಲ್ಲಿ use ಮಾಡುತ್ತಾರೆ, ಈ ವರ್ತಮಾನ ಇಲ್ಲಿಗೆ ಬರುತ್ತದೆ. ಇದನ್ನು ನಾನು ಹೇಳುವುದು ಅಲ್ಲ. Research and Analysis Wing (R.A.W.) ಅವರು maps ಕಳುಹಿಸುತ್ತಾರೆ. ಇವರು computerized maps ಕಳುಹಿಸಿದರೆ Cyber ಅಡಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಕದ್ದು handwritten maps ಜರ್ಮನಿಯಲ್ಲಿರತಕ್ಕಂಥವರು ಇಲ್ಲಿ ಸಂಶೋಧನೆ ಮಾಡಿ ಯಾವ್ಯಾವು ದನ್ನು stall ದುಡ್ಡು ಕಳುಹಿಸಿ ಇಲ್ಲಿ ಜನರನ್ನು ತಯಾರು ಮಾಡುತ್ತಾರೆ. ಇವರು ರಾತ್ರೋರಾತ್ರಿ ಹೋರಾಟಗಾರರಾಗಿ ಹೊರಚಿಮ್ಮುತ್ತಾರೆ. ನಮಗೆ power shortage, ನೀರು shortage, ರೋಡ್ shortage. ಇವರು ಬಂಡವಾಳವನ್ನು ಜನೋಪಯೋಗಿ ಕೆಲಸ ಬಂದು ಏನಾದರೂ ಹಾಕಿದ್ದಾರಾ? ಇವರ ಹತ್ತಿರ ಪಾರದರ್ಶಕತೆ ಎಲ್ಲಿದೆ? ಇವರ ಮೇಲೆ ಏನು ಕ್ರಮ ಜರುಗಿಸಬೇಕು.? ಯಾವ್ಯಾವ ಕ್ಷೇತ್ರಕ್ಕೆ ಬರುತ್ತಾರೆ? Administrative expenses ಶೇಕಡಾ 50ನ್ನು ಮೀರಬಾರದು. ಇವರು Five Star ನಲ್ಲಿಯೇ ಇರಬೇಕು. Executive Classನಲ್ಲಿಯೇ ಓಡಾಡಬೇಕು. A.C. ಬಂಗಲೆಯಲ್ಲಿಯೇ ಬದುಕಬೇಕು. Hummer ಕಾರಿನಲ್ಲಿರಬೇಕು, ಇವರದು ಜನಸೇವೆ. ನಾವು ಏನು ಮಾಡುತ್ತಿದ್ದೇವೆ. ನಾವು ದೇಶಕ್ಕೆ ಕ್ಷೌರ ಮಾಡುತ್ತಿದ್ದೇವಾ? ಇವರು ದೇಶಭಕ್ತರಾ? ಇಡೀ ಎಲ್ಲಾ ಹಾಗೆ ಮಲಗಿಕೊಂಡು ನಿದ್ದೆ ಮಾಡಿಬಿಡುವುದಾ? ಇವರ ವಿಚಾರ ಏನು ಚರ್ಚೆಯಾಗುವುದೇ ಬೇಡವೇ? ಇವರು ಎಲ್ಲೆಲ್ಲಿ ಹುಟ್ಟಿದ್ದಾರೆ, ಎಲ್ಲೆಲ್ಲಿ ಬೆಳೆದಿದ್ದಾರೆ, ಎಲ್ಲೆಲ್ಲಿ ಪಸರಿಸಿದ್ದಾರೆ, ಎಲ್ಲೆಲ್ಲಿ ಬೇರು ಬಿಟ್ಟುಕೊಂಡಿದ್ದಾರೆ ದೇವರಿಗೊಬ್ಬರಿಗೇ ಗೊತ್ತಾಗಬೇಕು. They are behind every developmental activity. ಈ ದೇಶದ ಪ್ರಗತಿಯನ್ನು, ಈ ರಾಜ್ಯದ ಪ್ರಗತಿಯನ್ನು ಸ್ಥಗಿತಗೊಳಿ ಸುವ ಸಲುವಾಗಿಯೇ ನಿಯುಕ್ತಿಗೊಂಡಿರುವಂತಹ ವಿದೇಶದಿಂದ ಹಣ ಪಡೆದುಕೊಳ್ಳುವಂತಹ ಜನ ಇವರು. ನಾನು ತಮಗೆ ಏನು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ, ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರ ಬೇಕು ಈ ಸದನದ ಮುಖಾಂತರ, ಮಾಧ್ಯಮಗಳ ಮುಖಾಂತರ ಜನರಿಗೂ

ಗೊತ್ತಾಗಬೇಕೆಂದು ನನ್ನ ಕಳಕಳಿ. ಈ ಹೋರಾಟಗಳು ನೈಜ ಹೋರಾಟಗಳಾಗಿದ್ದರೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಇವರಲ್ಲೂ ಉತ್ತಮರು ಇರಬಹುದು, ಕೆಲವರು ಒಳ್ಳೆಯ ಕೆಲಸ ಮಾಡಿರಬಹುದು. ಆದರೆ ಬಹುತೇಕ ಜನ ಈ ಸ್ವರೂಪದವರಿದ್ದಾರೆ. ರಾಜ್ಯ ಸರ್ಕಾರ ಏನಾದರೂ ಇದರ ಕಡೆಗೆ ಗಮನ ಕೊಟ್ಟಿದೆಯೇ? ಕೊಟ್ಟಿಲ್ಲವಾ? ನಿಮ್ಮ Internal Security Department ನದ್ದು ಏನು ಕರ್ತವ್ಯ? ಕರ್ನಾಟಕದಲ್ಲಿ register ಆಗಿರುವ NGO's ಎಷ್ಟು ಜನ ಇದ್ದಾರೆ? ಹೊರಗಡೆ register ಆಗಿ ಕರ್ನಾಟಕದಲ್ಲಿ ಬಂದು ಕೆಲಸ ಮಾಡುತ್ತಿರುವವರು ಎಷ್ಟು ಜನ ಇದ್ದಾರೆ? ಕರ್ನಾಟಕಕ್ಕೆ ಈ 1,069 ಕೋಟಿ ರೂ.ಗಳು ಬಂದಿರುವುದನ್ನು ಯಾರ್ಯಾರು ತೆಗೆದುಕೊಂಡಿದ್ದಾರೆ? ಯಾವ ಘನಕಾರ್ಯಕ್ಕಾಗಿ ಉಪಯೋಗಿಸಿದ್ದಾರೆ? ಎಷ್ಟು ಜನ ಇವರು Chartered Accountants ರವರ ಹತ್ತಿರ complete certify ಮಾಡಿಸಿಕೊಂಡು accounts file ಮಾಡಿದ್ದಾರೆ? ನಮಗೆ ಮಾಹಿತಿ ಬೇಕಲ್ಲವೇ? ನಮ್ಮದು ಕೇಳುವುದಿಲ್ಲವೇ? ಕೇಳುವ ಹಕ್ಕು ಇದೆಯಲ್ಲಾ? ನಾನು ಈ ವಿಚಾರಗಳನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬೇಕು. ನಾನು calling attention ನಲ್ಲಿ ತರುವುದಕ್ಕೆ ಆಗುವುದಿಲ್ಲ. Question Hour ನಲ್ಲಿ ಕೇಳುವುದಕ್ಕಾಗುವುದಿಲ್ಲ. Half an hour discussion ನಲ್ಲಿ ಆಗುವುದಿಲ್ಲ. ನಾನು ಆಡಳಿತ ಪಕ್ಷದವನಾಗಿ adjournment motion move ಮಾಡುವುದಕ್ಕೆ ಬರುವುದಿಲ್ಲ. ಅದಕ್ಕಾಗಿ ನಿಯಮ 69 ಕ್ಕೆ ಮೊರೆ ಹೋಗಿದ್ದೇನೆ. 3–4 ದಿವಸದಿಂದ ಕಾದು ಕುಳಿತಿದ್ದೆ. ತಾವು ಇವತ್ತು ಅವಕಾಶ ಕೊಟ್ಟಿದ್ದೀರಿ. ಮಾನ್ಯ ಮಂತ್ರಿಗಳಾದರೂ ಹೇಳಲಿ, ತಾವು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಮುಖ್ಯಮಂತ್ರಿಗಳು, ಗೃಹ ಸಚಿವರು ಅವರು statement ಮಾಡುವುದಾದರೂ ಮಾಡಲಿ. ನಮಗೆ ಬಹಳ ಮುಖ್ಯ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಮೇಲುಕೋಟೆ) : ಮಾನ್ಯ ಅಧ್ಯಕ್ಷರೆ, ಈ NGO ಗಳನ್ನು ನೇಮಕ ಮಾಡುವವರು ಯಾರು? ಇವರು ಎಲ್ಲಿಂದ ಬರುತ್ತಾರೆ? ಎಲ್ಲಿ ಸೃಷ್ಟಿಯಾಗುತ್ತಾರೆ? ಅವರ background ಏನು? ಅವರು ಯಾರು ಈ ರಾಜ್ಯಕ್ಕೆ, ಈ ದೇಶಕ್ಕೆ? ಅವರಿಂದ ಏನು ಅನುಕೂಲವಾಗುತ್ತಿದೆ? ಅಭಿವೃದ್ಧಿ ಏನು? ಯಾವ ಸರ್ಕಾರಕ್ಕೆ ಗೊತ್ತಿದೆ? ಅವರು 11,000 ಕೋಟಿ

ರೂ.ಗಳು ಎಂದು ಹೇಳುತ್ತಾರೆ. ನಾನು ಒಂದು ಬಾರಿ ಯಾವುದೋ ಒಂದು ಪತ್ರಿಕೆಯಲ್ಲಿ ಓದಿದ್ದೆ, 30,000 ಕೋಟಿ ರೂ.ಗಳು ಈ ದೇಶಕ್ಕೆ ವಿದೇಶಿ ಹಣ ಹರಿದು ಬರುತ್ತಿದೆ. ದೇಶ ಸೇವೆ ಮಾಡುವುದಕ್ಕೋಸ್ಕರ ಕೊಟ್ಟಂತಹ ಹಣವನ್ನು ಕಳ್ಳತನ ಮಾಡುತ್ತಾರೆ. ಇವರು ಯಾವ registration ನಲ್ಲಿ ಬರುತ್ತಾರೆ? ಇವರಿಗೆ ಸಂಪನ್ಮೂಲ ತೆಗೆದುಕೊಂಡು ಖರ್ಚು ಮಾಡುವುದಕ್ಕೆ ಅಧಿಕಾರ ಕೊಟ್ಟಿರುವವರು ಯಾರು? ದಯವಿಟ್ಟು ಅದರ ಬಗ್ಗೆಯೂ ಸ್ವಲ್ಪ ಬೆಳಕು ಚೆಲ್ಲಿದರೆ ನಮ್ಮಂಥವರಿಗೆ ಗೊತ್ತಾಗುತ್ತದೆ ಎನ್ನುವುದಕ್ಕೋಸ್ಕರ ಹೇಳುತ್ತಿದ್ದೇನೆ ಅಷ್ಟೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಅವರೆಲ್ಲಾ ಸ್ವಯಂಭೂ. ತಾವೇ ಹುಟ್ಟಿಕೊಂಡುಬಿಡುತ್ತಾರೆ. ಇವರಿಗೆ ಯಾರೂ ಹುಟ್ಟಿಸುವುದಿಲ್ಲ.

ಶ್ರೀ ಬಿ.ಸುರೇಶ್‌ಗೌಡ : NGO ಗಳಿಗೆ ಅಪ್ಪ–ಅಮ್ಮಂದಿರು ಯಾರೂ ಇಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ರಮೇಶ್‌ಕುಮಾರ್‌ರವರೆ ಒಂದು ನಿಮಿಷ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದರು, ಇವು ಏನು ಸ್ವಯಂಭೂ ಆಗಿ ಹುಟ್ಟುಕೊಂಡಿವೆಯೇ ಎಲ್ಲಿಂದ ದುಡ್ಡು ಬರುತ್ತದೆ? 30,000 ಕೋಟಿ ರೂ.ಗಳು ಎಂದು ಇವರು ಕೇಳುತ್ತಿದ್ದಾರೆ. ನೀವು NGO ಗಳ ಬಗ್ಗೆ ಕೂಲಂಕಷವಾಗಿ ಹೋದರೆ, ನಮ್ಮ ಕಡೆ ಒಂದು NGO ಇದೆ. ಈ ದೇವದಾಸಿ ಮಕ್ಕಳನ್ನು ರಕ್ಷಣೆ ಮಾಡತಕ್ಕಂಥದ್ದು ಅವರಿಗೆ ಪುನರ್ವಸತಿ ಒದಗಿಸಿ ಕೊಡುತ್ತೇವೆ ಎಂದು ಅವರಿಗೆ ವಿದೇಶದಿಂದ ರೊಕ್ಕ ಬರುತ್ತದೆ. ಅಲ್ಲಿ ದೇವ ದಾಸಿ ಮಕ್ಕಳೂ ಇಲ್ಲ. ದೇವದಾಸಿಗಳೇ ಇಲ್ಲ. ಇಂತಿಂಥವು ಬಹಳ ಹುಟ್ಟಿ ಕೊಂಡಿವೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಎಷ್ಟು dangerous ಅಂದರೆ ಮಾನ್ಯ ಅಧ್ಯಕ್ಷರೆ, ಜಮ್ಮು–ಕಾಶ್ಮೀರದಲ್ಲಿ ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಒಂದು NGO. ಅವರು ಜಮ್ಮು–ಕಾಶ್ಮೀರದಲ್ಲಿ ಸ್ಥಾಪನೆ ಮಾಡಿ ಈಶಾನ್ಯ ಭಾರತಕ್ಕೆ ಹೋಗಿಬಿಡುತ್ತಾರೆ. ಈಶಾನ್ಯ ಭಾರತದಲ್ಲಿ ಮಾನವ ಹಕ್ಕು ಬಿಟ್ಟುಬಿಡುತ್ತಾರೆ.

Violence against women – actually, violence in India against woment

highest ಇರತಕ್ಕಂಥದ್ದು ಉತ್ತರಪ್ರದೇಶದಲ್ಲಿ ಅಲ್ಲಿ ಹೋಗುವುದಿಲ್ಲ. ಈ ವಿದೇಶಿ ಹಣ ತೆಗೆದುಕೊಂಡು strategic ಆಗಿ ಸೂಕ್ಷ್ಮವಾಗಿರುವಂತಹ ಜಮ್ಮು–ಕಾಶ್ಮೀರದಲ್ಲಿ, ಇನ್ನೊಂದು ಕಡೆ north east ನಲ್ಲಿ, ಈ ದೇಶದ ಗಡಿಭಾಗದಲ್ಲಿ ಇವರು ಬರುತ್ತಾರೆ ಎಂದರೆ, ಇವರು ಎಂತಹ ದೇಶಭಕ್ತರು ಇರಬಹುದು? ತಾವು ಯೋಚನೆ ಮಾಡಿ. ರಾಜ್ಯದಲ್ಲಿ ಇವರು ಇನ್ನು ಏನೇನು ಮಾಡುತ್ತಿರ ಬಹುದು? ಇವರು ಸುಪ್ರೀಂಕೋರ್ಟ್‌ಗೆ ಹೋಗುತ್ತಾರೆ. Policy making bodies ನಲ್ಲಿ Indian companies ಯಾವ್ಯಾವುದು ಇವೆ, ಅವು ಇರಬಾರದು ಎಂದು ಸುಪ್ರೀಂಕೋರ್ಟ್‌ಗೆ ಹೋಗುತ್ತಾರೆ. Multi National Companies policy making bodies ನಲ್ಲಿ ಇರಬಹುದು, Indian Companies ಇರಬಾರದಂತೆ. ಇದು ಕೆಲವೆಲ್ಲಾ parliament ನ ವ್ಯಾಪ್ತಿಗೆ ಬರುತ್ತವೆ. ಆದರೆ ಹೋರಾಟದ ಒಂದು ಪ್ರಯುಕ್ತ ನೀವು ರಾಜಕೀಯ ಜೀವನಕ್ಕೆ ಬಂದಿದ್ದೀರಿ. ಎಲ್ಲಾ ಮಜಲುಗಳನ್ನು ರಾಜಕೀಯ ಜೀವನದುದ್ದ ನೀವು ನೋಡಿದ್ದೀರಿ. ಏಳು–ಬೀಳು, ಸೋಲು–ಗೆಲುವು ಎಲ್ಲಾ ನೋಡಿದ್ದೀರಿ. ಸ್ವಲ್ಪ ಯೋಚನೆ ಮಾಡಿ. ನಾನು ಅದೇ ಕೆಲಸವಾಗಿ ತರಿಸಿಕೊಂಡೆ, ಪಿಂಗಳಿ ವೆಂಕಯ್ಯ ಎನ್ನುವ ವರು ಆಕಸ್ಮಿಕವಾಗಿ ಗಾಂಧೀಜಿಯವರ ಪರಿಚಯವಾಗುತ್ತಾರೆ. ಆತನದ್ದು ಏನೇನೋ ಜೀವನ. ಈ ದೇಶಕ್ಕೆ ತ್ರಿವರ್ಣ ಧ್ವಜ ಕೊಟ್ಟವರು ಆತನೆ. ಗಾಂಧೀಜಿ ಕಾಕಿನಾಡಾ session ಅನ್ನು call ಮಾಡಿದಾಗ ಆತ ತಂದು ಕೊಟ್ಟಿದ್ದು, final ಆಗಿ ಅದು approval ಆಯಿತು. ಸ್ವಾತಂತ್ರ್ಯ ಬಂದ ಮೇಲೆ ಆತ 1963 ನೇ ಇಸವಿಯಲ್ಲಿ ಸತ್ತುಹೋದರು. ಆತನಿಗೆ ಒಂದು ತಾಮ್ರ ಪತ್ರ ಕೊಟ್ಟು, pension ಕೊಟ್ಟರೆ, ಆತ ಹೇಳುತ್ತಾನೆ ಏನೆಂದರೆ, ನಾನು ಭಿಕ್ಷೆ ಬೇಡಿ ಸಾಯುತ್ತೇನೆ, ನಾನು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದು, ಎಲ್ಲಾ ಕಳೆದುಕೊಂಡಿದ್ದು ಈ pension ಗೆ ತಾಮ್ರ ಪತ್ರಕ್ಕೆ ಅಲ್ಲವೆಂದು ಹೇಳುತ್ತಾರೆ. ಅಂಥವರು ಒಂದು ಕಡೆಗೆ ಇದ್ದಾರೆ. ನಮ್ಮ ಮೇಲೆ ಸಿಟ್ಟುಗೊಂಡು ಈ system ಸರಿಯಿಲ್ಲವೆಂದು ಬಂದೂಕನ್ನು ಹೆಗಲಿಗೆ ಏರಿಸಿಕೊಂಡು ಕಾಡಿಗೆ ಹೋದಂತಹ ನಕ್ಸಲೈಟ್ಸ್ ಒಂದು ಕಡೆ ಇದ್ದಾರೆ. ನಮಗೆ ಇವರ ನೆನಪೂ ಇರುವುದಿಲ್ಲ. ಅವರ ಬಗ್ಗೆ ಗೌರವವೂ ಇರುವುದಿಲ್ಲ. ಇವರು ನಮ್ಮ ಮಧ್ಯೆ ರಾರಾಜಿಸುತ್ತಿದ್ದಾರೆ. ಇಷ್ಟೊತ್ತಿ

ಗಾಗಲೇ they should have been ready. ನೀವು ಎಷ್ಟು ಜನರನ್ನು round up ಮಾಡಿದ್ದೀರಿ? ಏಕೆ ಮಾಡುವುದಿಲ್ಲ? Internal Security Department ನವರ ಉದ್ಯೋಗ ಏನು? I am surprised. ಮಾನ್ಯ ಅಧ್ಯಕ್ಷರೆ, ಇದಕ್ಕಿಂತ ಹೆಚ್ಚು ಹೇಳುವಂತಹ ಅಗತ್ಯವೂ ಇಲ್ಲ. ಇವರ ಎಲ್ಲಾ ಚಟುವಟಿಕೆಗಳು ಅಪಾಯ ಕಾರಿ. ಉತ್ತಮರು ಇದ್ದರೆ ಅವರ ಬಗ್ಗೆ ನಮಗೆ ಆಕ್ಷೇಪಣೆ ಇಲ್ಲ. ಲೆಕ್ಕ ಕೊಡುವುದಕ್ಕೆ ಯಾರು ಹಿಂದೇಟು ಹಾಕುತ್ತಾನೆ ಅವನು *prima facie* ಕಳ್ಳ. ವಿದೇಶದಿಂದ ದುಡ್ಡು ತಂದು ಈ ದೇಶದ ಉದ್ಧಾರ ಮಾಡುತ್ತೇವೆಂದು ಹೇಳುತ್ತಾರಲ್ಲಾ, ಅವನು ದೇಶದ್ರೋಹಿ. ನಂಬಿಕೆಗೆ ಅರ್ಹ ಅಲ್ಲ. ಇವರು ತಂದ ಹಣ ಕಡಿಮೆ ಪ್ರಮಾಣದ ಹಣ ಅಲ್ಲ. 1,069 ಕೋಟಿ ರೂ.ಗಳು. ಮಾನ್ಯ ಲಕ್ಷ್ಮಣ ಸವದಿಯವರು ಹೇಳಿದಂತೆ ಅವರು ಯಾವ್ಯಾವ ಕಾಸು ತೆಗೆದುಕೊಂಡಿದ್ದಾರೋ ನಮಗೆ ಗೊತ್ತೇ ಇಲ್ಲ. ಆದರೆ, ನಿಮಗೆ ನಮಗೆ, ಎಲ್ಲಾದರೂ ಊರಿನಲ್ಲಿ ಒಂದ ಅಂಗನವಾಡಿ ಕಟ್ಟಡ ಕಟ್ಟಿಸಬೇಕೆಂದರೆ ಆ ಎರಡು ಲಕ್ಷಕ್ಕೆ ನಾವು ತಿಣುಕಾಡಬೇಕು, ಆಲೋಚನೆ ಮಾಡಬೇಕು. ಕೈ ಕಾಲು ಹಿಡಿದುಕೊಳ್ಳಬೇಕು. ಇನ್ನು ನಾನು ಮಾತನಾಡುವುದನ್ನು ಇಲ್ಲಿಗೇ ನಿಲ್ಲಿಸುತ್ತೇನೆ. ಮಾನ್ಯ ಗೃಹಮಂತ್ರಿಯವರು ಬಂದಿದ್ದಾರೆ. ಬಹುತೇಕ ಅವರಲ್ಲಿ ಎಲ್ಲಾ ವರ್ತಮಾನಗಳು ಇರಬಹುದು ಎಂದು ನಾನು ಭಾವಿಸುತ್ತೇನೆ. ನಾನು ತಮ್ಮ ಮುಖಾಂತರ ಕುಳಿತುಕೊಳ್ಳುವ ಮೊದಲು ಅವರಲ್ಲಿ ವಿನಂತಿ ಮಾಡುವಂಥದ್ದು ಇಷ್ಟೆ, ವಿಚಾರಣೆ ಮಾಡುತ್ತೇವೆ. .

ಶ್ರೀ ಕೆ.ಜೆ.ಬೋಪಯ್ಯ : ಮಾನ್ಯ ಅಧ್ಯಕ್ಷರೆ,. . .

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಬೋಪಯ್ಯನವರೆ ಒಂದೇ ಒಂದು ನಿಮಿಷ. I will complete please. ಕಳುಹಿಸಿಕೊಡುತ್ತೇವೆ ಎಂದು ಅಲ್ಲ. ಇದಕ್ಕೂ ಮೊದಲು ಒಂದು ವಿಚಾರವನ್ನು ಹೇಳಿದ್ದೇನೆ. ಆರು ವರ್ಷ ಗಳು ಸತತವಾಗಿ ಆ ವ್ಯಕ್ತಿ ನಡೆಸುವಂತಹ NGO ಪರವಾಗಿ Chartered Accountant ಹೇಳಿರತಕ್ಕಂಥದ್ದನ್ನು, ನಿಯಮಗಳನ್ನು ಆತ ಗೌರವಿಸಿಲ್ಲ, ಲೆಕ್ಕ ಕೊಟ್ಟಿಲ್ಲ. It amounts to serious fraudulent mistakes ಎನ್ನುವ observation ಅನ್ನು, 'fraudulent' ಎನ್ನುವ ಪದವನ್ನು Chartered Accountant ರವರು

use ಮಾಡುತ್ತಾರೆ. ನೀವು ಅದನ್ನು Revenue Enforcement Directorate ಗೆ ಕಳುಹಿಸಬೇಕೆಂದು ಹೇಳಿದ್ದೆ. ಇವತ್ತು ಮತ್ತೆ ನಾನು ಸರ್ಕಾರದ ಮೇಲೆ ಆಗ್ರಹ ಮಾಡುತ್ತಿದ್ದೇನೆ, ಅತ್ಯಂತ ತ್ವರಿತ ಗತಿಯಲ್ಲಿ ಇವರು ಯಾರು? ಯಾವಾಗ ಜನ್ಮ ಪಡೆದುಕೊಂಡರು? ಇವರು ಮಾಡುತ್ತಿರುವಂತಹ ಗೌರವಾನ್ವಿತ ಕೆಲಸ ವೇನು? ಬಂಡವಾಳ ಎಲ್ಲೆಲ್ಲಿ ಎಷ್ಟೆಷ್ಟು ಹಾಕಿದ್ದಾರೆ? ಯಾವ್ಯಾವ ಹೋರಾಟ ಗಳು ಇವರ ಹಿಂದೆ ಇದ್ದಾರೆ? ಮುಂದಕ್ಕಾದರೂ ಕೂಡ ಈ ರಾಜ್ಯದಲ್ಲಿ ಆಗು ವಂತಹ ಅಭಿವೃದ್ಧಿ ಕೆಲಸಗಳಿಗೆ ಅವರು ಅಡ್ಡ ಬರದೇ ಇರುವುದಕ್ಕೆ ನಾವು ಎಚ್ಚೆತ್ತುಕೊಂಡಿದ್ದೇವೆ, ನಾವು ಜಾಗೃತರಾಗಿದ್ದೇವೆ, ಈ ಗೋಮುಖ ವ್ಯಾಘ್ರಗಳ ಪರಿಚಯ ನಮಗೆ ಆಗಿದೆ ಎನ್ನುವ message ಅವರಿಗೆ ಮುಟ್ಟಬೇಕೆನ್ನುವುದು ನನ್ನ ಸದಿಚ್ಛೆ. ದಯಮಾಡಿ ತಾವು ಸರ್ಕಾರಕ್ಕೆ ಆದೇಶ ಕೊಡಬೇಕು. ಮಾನ್ಯ ಸಚಿವರು positive ಆಗಿ with specific assurance ಈ house ಅನ್ನು ಸಮಾಧಾನಪಡಿಸಬೇಕೆಂದು ತಮ್ಮ ಮುಖಾಂತರ ನಾನು ಒತ್ತಾಯ ಮಾಡು ತ್ತೇನೆ.

ಶ್ರೀ ತನ್ವೀರಸೇಠ್ : ಮಾನ್ಯ ಅಧ್ಯಕ್ಷರೆ, ವಿಪರ್ಯಾಸದ ಸಂಗತಿ ಏನೆಂದರೆ, ಈ NGO ಗಳಿಗೆ ಬರುವಂತಹ ಹಣಕ್ಕೆ ಯಾವುದೇ ಕ್ರಾಸ್ ಚೆಕ್ ಇಲ್ಲ. ಅವರು ವಿದೇಶದಿಂದ ನೇರವಾಗಿ ಅವರ account ಗೆ ತೆಗೆದುಕೊಳ್ಳ ಬಹುದು. ಆದರೆ ಒಂದು ಸರ್ಕಾರ ಯಾವುದಾದರೂ ಕಾರ್ಯಕ್ರಮ ನಮ್ಮ ವಿದೇಶಿ ಬಂಡವಾಳ ಹೂಡಿಕೆ ಮಾಡಿಕೊಳ್ಳಬೇಕಾದರೂ ಕೇಂದ್ರ ಸರ್ಕಾರದ ಮೂಲಕವೇ ಬರಬೇಕು. ರಾಜ್ಯ ಸರ್ಕಾರಗಳಿಗೆ ಒಂದು ಅನುಮಾನದಿಂದ ನೋಡುವಂತಹ ಅಥವಾ ಶಂಕೆಯಿಂದ ನೋಡುವಂತಹ ಪದ್ಧತಿ ಇದೆ. ಆದರೆ NGO's ಗೆ ಬರುವಂಥದ್ದು ಯಾವ ರೂಪದಲ್ಲಿ ಬರುತ್ತದೆ? ಹೇಗೆ ಬರುತ್ತದೆ? ಅವರು ಏನು ಖರ್ಚು ಮಾಡುತ್ತಾರೆ, ಅದರ ಮೇಲೆ ನಿಯಂತ್ರಣ ಇಲ್ಲದೇ ಇರುವುದು ಒಂದು ಅಪಾಯ ಇದೆ.

ಶ್ರೀ ಕೆ.ಜಿ.ಬೋಪಯ್ಯ : ಮಾನ್ಯ ರಮೇಸ್ ಕುಮಾರ್ ಅವರೇನು ಪ್ರಸ್ತಾಪ ಮಾಡಿದ್ದಾರೆ, ಬಹುಶಃ ಈ ಎನ್.ಜಿ.ಒ.ಗಳು ಏನಿವೆ, ಇವರು ವಿದೇಶಿ ಹಣ ತರುವುದು ಯಾರಿಗೂ ಗೊತ್ತೇ ಆಗುವುದಿಲ್ಲ. ಎಲ್ಲಾ online ನಲ್ಲಿ

credit ಆಗುತ್ತದೆ, ಮತ್ತೆ ಅವರ ವಿಳಾಸಗಳನ್ನು ಹುಡುಕಿದರೆ, ಈಗ ನಮ್ಮ ಜಿಲ್ಲೆಯಲ್ಲಿ 4–5 ಎನ್.ಜಿ.ಓ ನೋಂದಣಿಯಾಗಿದ್ದಾವೆ. ಎಲ್ಲಾ Wild Life-I, Wild Life-II, Forest Protection, Coorg Model Forest, ಹೀಗೆಲ್ಲಾ ಹಾಕಿಕೊಂಡಿದ್ದಾರೆ, ಅಂದರೆ ಅವರ ವಿಳಾಸ ಎಲ್ಲೂ ಇಲ್ಲ. ಯಾರೊ ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಹಾಕಿಕೊಂಡು ದುಡ್ಡು ಬರುತ್ತದೆ. ದುಡ್ಡು ಬಂದು, ಈಗ ಹೇಳಿದಂತೆ ಎಲ್ಲಾ ಅಭಿವೃದ್ಧಿ ಕೆಲಸಗಳಿಗೆ ಅಡ್ಡಿಪಡಿಸಲು ಉಪಯೋಗಿಸು ವಂಥದ್ದು. ಗಿರಿಜನರ ಹೆಸರಿನಲ್ಲಿ ಗಿರಿಜನರನ್ನೆಲ್ಲಾ ಕಾಡಿನಿಂದ ನಾವೆಲ್ಲಾ ಸ್ಥಳಾಂತರ ಮಾಡಿ ಕಾಡನ್ನು ಉಳಿಸುತ್ತೇವೆಂದು ಹೇಳಿ ಒಂದಿಷ್ಟು ಎನ್.ಜಿ.ಓ. ಗಳಿವೆ ಬಲಾತ್ಕಾರ ಮಾಡಕೂಡದು, ಅವರಾಗಿಯೇ ಹೋದರೆ ಪುನರ್ವಸತಿ ಇದೆ ಎಂದು ಕೇಂದ್ರ ಸರ್ಕಾರ ದುಡ್ಡು ಕೊಡುತ್ತದೆ. ಅಧಿಕಾರಿಗಳು ಅವ ರೊಂದಿಗೆ ಸೇರಿಕೊಂಡು ಅವರಿಗೊಂದು rehabilitation ಎಂದು ಮಾಡು ವುದು. ಅಧಿಕಾರಿಗಳು ಅವರೊಂದಿಗೆ ಸೇರಿಕೊಂಡು ಅವರಿಗೊಂದು certificate ಕೊಡುವುದು. By the co-ordination and co-operation of so called N.G.O., we have shifted so many people... ಅದನ್ನು ತೆಗೆದು ಕೊಂಡು ಹೋಗಿ ಅಲ್ಲಿ ಕೊಟ್ಟರೆ ಗಿರಿಜನರ ಹೆಸರಿನಲ್ಲಿ ದುಡ್ಡು ಹೊಡೆಯು ವುದೇ, ಆಮೇಲೆ ಅವರ ಪರಿಸ್ಥಿತಿ ಏನೆಂದು ಹೇಳುವುದು ಇವತ್ತು ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಇವತ್ತೇನಾದರೂ ಕಾಡು ಉಳಿದಿದ್ದರೆ ಆ ಗಿರಿಜನರಿಂದ. ಅದರೊಂದಿಗೆ ಬೆಳೆದು, ಆ ಕಾಡನ್ನು ಉಳಿಸಿಕೊಂಡು ಬಂದಿದ್ದಾರೆ. ಅವರಿಗೆ ಇಲ್ಲದ ಆಸೆ ಆಕಾಂಕ್ಷೆಗಳನ್ನು ತೋರಿಸಿ shift ಮಾಡುವುದನ್ನೂ ನೋಡಿದ್ದೇವೆ. ಅವರಾಗಿ ಬಂದು ಹೊರಗಡೆಗೆ ಹೋದರೆ, ಇವತ್ತು ಆನೆಯ ಕಾಟವಿದೆ, ನಾನು ಒಪ್ಪುತ್ತೇನೆ. ಆದರೆ ಇವತ್ತು ಅದಾಗುತ್ತಿಲ್ಲ. ಇವತ್ತು ಹೇಗಿದೆ ಎಂದರೆ, ನಾವು ಇದನ್ನೆಲ್ಲಾ ಗಮನಿಸಿ ಹೈ ಕೋರ್ಟಿನಲ್ಲಿ ಒಂದು ರಿಟ್ ಪಿಟಿಷನ್ ಹಾಕಿಸಿದ್ದೆ. ಇವರ ಎಲ್ಲಾ ಚಟುವಟಿ ಕೆಗಳ ಬಗ್ಗೆ ಮತ್ತು ವಿದೇಶಿ ಹಣದ ಬಗ್ಗೆ ಸಿಬಿಐ ತನಿಖೆಯಾಗಬೇಕೆಂದು ಸರ್ಕಾರವನ್ನು ಪಾರ್ಟಿ ಮಾಡಿ ಹಾಕಿದರೆ...ಕೇಂದ್ರ ಸರ್ಕಾರಕ್ಕೆ ಬರೆದರೂ ಏನೂ ಆಗಿಲ್ಲ, ಕೋರ್ಟಿನಿಂದಲಾದರೂ ಡೈರೆಕ್ಷನ್ ಬರಲೆಂದು ಹಾಕಿದ್ದು.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಹೊಸ ತನಿಖೆ ಅಗತ್ಯವಿಲ್ಲ. Intelligence Bureau ದವರು they have already conducted the enquiry. R.A.W ದವರು Mr.R. N. Singh ಎಂಬ ಅಧಿಕಾರಿ, ವರದಿಯನ್ನೆಲ್ಲಾ ತಯಾರಿ ಮಾಡಿದ್ದೆಲ್ಲಾ ಆಗಿದೆ. ನಮ್ಮಲ್ಲಿ ಕರ್ನಾಟಕದಲ್ಲಿ ಯಾರಿದ್ದಾರೆ, that is what we want, ಈ 1069 ಕೋಟಿ ಹಣವನ್ನು ತಂದ ಕರ್ನಾಟಕದವರು ಯಾರು?

ಶ್ರೀ ಕೆ.ಜಿ.ಬೋಪಯ್ಯ : ಆ ಅಧಿಕಾರಿಗಳು ಹೇಗಿದ್ದಾರೆಂದರೆ, ಆ ರಿಟ್ ಪಿಟಿಷನ್ ಗೆ ಒಂದೂವರೆ ವರ್ಷವಾದರೂ ಒಂದು objection ಹಾಕಿಲ್ಲ. ಏನಾದರೂ ಆಗುತ್ತಿಲ್ಲ. ಕೋರ್ಟಿನಲ್ಲಿ ಬೇರೆಯದೆಲ್ಲಾ ಸೀರಿಯಸ್ ಆಗುತ್ತದೆ, ನಾವು ಇಂಥ ವಿಚಾರವನ್ನು ಹೇಳಿಕೊಂಡು ಹಾಕಿದರೆ, ನಮಗೆ ದೊಡ್ಡ ಲಾಯರ್ ಅನ್ನು ಇಟ್ಟುಕೊಳ್ಳುವಷ್ಟು ಆಗುವುದೂ ಇಲ್ಲ. ಹಾಕಿದರೆ ಆ seriousness ಬರುವುದಿಲ್ಲ, ಇವತ್ತು ಹಾಗೆಯೇ ಬಿದ್ದಿದೆ. So far, neither the Forest Department... ಮತ್ತು ನಮ್ಮ ಕರ್ನಾಟಕ ಮುಖ್ಯ ಕಾರ್ಯದರ್ಶಿಗಳಿಗೆ ಸಂಬಂಧಿಸಿದಂತೆ ಏನೂ ಮಾಡಿಲ್ಲ. ಆ ಕೇಸ್ ಇದ್ದ ದಿವಸ nobody will appear, ಇದು ವಾಸ್ತವಾಂಶ. ಮತ್ತೆ ಇವರಿಗೆಲ್ಲಾ ಏನಿದೆ ಎಂದರೆ, ಆ ಸರ್ಕಾರಿ ಅಧಿಕಾರಿಗಳು, ಒಬ್ಬರು ಇದ್ದಾರೆ ಅವರು 13 ಹುಲಿಗಳನ್ನು ನಾಗರ ಹೊಳೆಯಲ್ಲಿ ಕೊಂದಿದ್ದಾರೆ, ಅವರಿಗೆ ಇವತ್ತ ಬಿರುದು ಏನೆಂದರೆ, ಹುಲಿ ತಜ್ಞ. ಹುಲಿ ತಜ್ಞ ಆಗಬೇಕಾದರೆ, ಹುಲಿ ಕೊಲ್ಲಬೇಕು. ಅವರು ಬಿಎಂಡಬ್ಲ್ಯೂ ಕಾರಿನಲ್ಲಿ ಓಡಾಡುತ್ತಾರೆ, ಟ್ಯಾಕ್ಸ್ ಫ್ರೀ ಕಾರನ್ನು ತರಿಸಿದ್ದಾರೆ. ಈ ವ್ಯವಸ್ಥೆಗೆ ನೇರವಾಗಿ ಆ ಅಧಿಕಾರಿ ಯಾರಿದ್ದಾರೆ,

ಅಧ್ಯಕ್ಷರು : ಆತ ಬಂದೂಕಿನಿಂದ ಹೊಡೆದು ಕೊಂದನಾ?

ಶ್ರೀ ಕೆ.ಜಿ.ಬೋಪಯ್ಯ : ನಾಗರಹೊಳೆಯಲ್ಲಿ ದೊಡ್ಡ ಇದಾಯಿತಲ್ಲಾ, ಅವರಿಗೆ ಇದೇನೊ ಕಾಲರ್ ಕಟ್ಟಿ 13 ಹುಲಿಗಳು ಸತ್ತು ಹೋಯಿತು. ಇವತ್ತು ಕೇಂದ್ರ ಸರ್ಕಾರದ Wild Life Board ನಲ್ಲಿ he is a member. Tiger Reserve . . . ಮತ್ತೊಂದು ಅದಕ್ಕೆ ಇದೆಯಲ್ಲಾ, ಎಲ್ಲಾ ಸದಸ್ಯರೇ. ಇಲ್ಲಿ ನಮ್ಮ ಅರಣ್ಯ

ಸಚಿವರ ಅಧ್ಯಕ್ಷತೆಯಲ್ಲಿ ಇಲ್ಲೊಂದಿದೆ, ಆ ಬೋರ್ಡಿನಲ್ಲಿ ಅವರೇ ಸದಸ್ಯರು, ಎಂ.ಎಲ್.ಎ ಆಗಿ ನಾನು ಮತ್ತು ಆ ಕಡೆಯಿಂದ ಒಬ್ಬರು ಇದ್ದಾರೆ, ಎಲ್ಲಾ ಎನ್.ಜಿ.ಒಗಳೇ.

ಶ್ರೀ ಪ್ರಮೋದ್ ಮಧ್ವರಾಜ್ : ಹುಲಿತಜ್ಞ, ಉಲ್ಲಾಸ್ ಕಾರಂತ್.

ಶ್ರೀ ಕೆ.ಜಿ.ಬೋಪಯ್ಯ : ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ ಬಿಡಿ ಬೇಡ. ವಿಧಾನಸಭೆಯೊಳಗೆ ಅವರು ಹೆಸರು ಹೇಳುವಷ್ಟು ದೊಡ್ಡವರಲ್ಲ. 13 ಹುಲಿ ಕೊಂದಿದ್ದಾರೆ, ಹಾಗಾಗಿ ಅದು ಒಳ್ಳೆಯ ಕೆಲಸವೆಂದು ಹೇಳಬೇಕು, ಇವರೆಲ್ಲಾ ಪ್ರಾಣಿಗಳನ್ನು ರಕ್ಷಣೆ ಮಾಡುವವರು, ಪ್ರಾಣಿಗಳ ಮೇಲೆ ದಯಾ ತೋರುವವರು. ಹಾಗಾಗಿ ನಾನು ಗೃಹ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ನಮ್ಮ ಜಿಲ್ಲೆಯಲ್ಲೂ ನಡೆಯುತ್ತಿದೆ, ತಾವು ಇದ್ದೀರಿ, ಅವರ ಚಟುವಟಿಕೆಯಲ್ಲಾ ಗೊತ್ತಿದೆ. ರಮೇಶ್ ಕುಮಾರ್ ಅವರು ಏನೊಂದು ವಿಚಾರವನ್ನು ಎತ್ತಿದ್ದಾರೆ, ಇದನ್ನು ಗಂಭೀರವಾಗಿ ತೆಗೆದುಕೊಂಡು, ಇವರು ಸಮಾಜಕ್ಕೆ ದ್ರೋಹ ಮಾಡುವುದು, ಅಭಿವೃದ್ಧಿಗೆ ವಿರೋಧವಾಗಿ ಕೆಲಸ ಮಾಡುವ organization ಬಗ್ಗೆ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕು. ಮತ್ತು ನಿಮ್ಮ ಮೇಲ್ಮಟ್ಟದ ಕೆಲವು ಅಧಿಕಾರಿಗಳು ನಾನು ಎಲ್ಲರನ್ನು ಹೇಳುವುದಿಲ್ಲ. ಅರಣ್ಯ ಇಲಾಖೆಯಲ್ಲೂ ಬಹಳ ಒಳ್ಳೆಯ ಅಧಿಕಾರಿಗಳಿದ್ದಾರೆ. ಅವರದು ಇವರದು ಸಂಬಂಧವೇನು ಈ ಎಲ್ಲಾ ವಿವರಗಳನ್ನು detail ಆಗಿ... ಕೆಲವರು ಪೊಲೀಸ್ ಇಲಾಖೆಯಲ್ಲೂ ಇದ್ದಾರೆ, ಅವರನ್ನು ಕಂಡರೆ ಭಯ, ಭಯವೊ ಅಥವಾ ದುಡ್ಡಿನ ಆಸೆಗಾಗಿ ಭಯವೆಂದು ನಾಟಕವಾಡುತ್ತಾರೊ ಗೊತ್ತಿಲ್ಲ. ಇದೆರಡೂ ಇದೆ. ಹಾಗಾಗಿ ಇದರ ಬಗ್ಗೆ ಸಮಗ್ರ ತನಿಖೆ ಮಾಡಿ, ಈ ರೀತಿ ಅಭಿವೃದ್ಧಿಗೆ ವಿರೋಧವಾಗಿ ಕೆಲಸ ಮಾಡುವ ಎಲ್ಲಾ ಎನ್.ಜಿ.ಒಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಫೆರಾ, Foreign Exchange Regulation Act ಉಲ್ಲಂಘನೆಯಾಗಿದೆ, ಇದೆಲ್ಲದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೂಡ ಅಧ್ಯಕ್ಷರ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಜಿ.ಹೆಚ್.ಶ್ರೀನಿವಾಸ : ನಮ್ಮ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಯಲ್ಲಿ NGO ಅನ್ನು ಯಾವ ರೀತಿ ಮಾಡಿದ್ದಾರೆನ್ನುವುದಕ್ಕೆ ಒಂದು ಉದಾ ಹರಣೆ ಕೊಡುತ್ತೇನೆ. ಇದು ಅನಾಥ ಮಕ್ಕಳನ್ನು ಪೋಷಣೆ ಮಾಡುವು ದಕ್ಕೋಸ್ಕರ ಅಡಿಕೆ ತೋಟ ಬೆಳೆಸಬೇಕು ಎನ್ನುವ ಸ್ಕೀಂ ಅದು. 8 ವರ್ಷ ಬೆಳೆಸಿದರೆ ಇದರಿಂದ ಪ್ರತಿವರ್ಷ ಇಷ್ಟಿಷ್ಟು ಆದಾಯ ಬರುತ್ತದೆ, ಆ ಆದಾಯ ದಲ್ಲಿ ನಾವು life long ಅನಾಥ ಮಕ್ಕಳನ್ನು ಬೆಳೆಸುತ್ತೇವೆ ಎಂದು ಒಂದು project report ಮಾಡಿ ತರೀಕೆರೆಯ ಮುಖ್ಯರಸ್ತೆಯಲ್ಲಿ ಕಾಂಪೌಂಡ್ ಕಟ್ಟಿ ಒಂದು ಅಡಿಕೆ ತೋಟ ಬೆಳೆಸಿದ್ದಾರೆ. ಅದರಲ್ಲಿ air conditioned ಮನೆಯೆಲ್ಲಾ ಇದೆ, ಈ ರೀತಿ ಅವರಿಂದ ಹಣವೆಲ್ಲಾ ದುರುಪಯೋಗ ವಾಗುತ್ತಿದೆ. ಅಂಥವುಗಳ ಬಗ್ಗೆಯೂ ಕೂಡ ನಮ್ಮ ಗೃಹ ಇಲಾಖೆ ಪರೀಕ್ಷಿಸಿ ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್ ಅವರು ಬಹಳ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿ ಸರ್ಕಾರಕ್ಕೆ ಇದರ ಗಂಭೀರತೆಯನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ನಾನು ರಮೇಶ್ ಸಾಹೇಬರಿಗೆ ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ, ಬರೀ ವಿದೇಶದಿಂದ ಹಣ ತಂದಿರುವ ಎನ್.ಜಿ.ಓಗಳ ಬಗ್ಗೆ ಅಷ್ಟೆ ತನಿಖೆ ಮಾಡಲು ಒತ್ತಾಯ ಮಾಡುತ್ತೀರೊ ಅಥವಾ ರಾಜ್ಯ ಸರ್ಕಾರ ಲೂಟಿ ಮಾಡಿರುವ ಎನ್.ಜಿ.ಓಗಳ ಬಗ್ಗೆಯೂ ಕ್ರಮ ತೆಗೆದುಕೊಳ್ಳುವ ಸಲುವಾಗಿ ನಿಮ್ಮ ಸಲಹೆ ಏನಾದರೂ ಇದೆಯಾ?

ಶ್ರೀ ಕೆ.ಆರ್.ರಮೇಶ್ ಕುಮಾರ್ : ಲೂಟಿಕೋರರೆಂದರೆ ಕೋಪಾನಪ್ಪ, ಯಾವ ಲೂಟಿಕೋರರಿದ್ದರೂ ಅವರ ಮೇಲೆ ಕ್ರಮ ಜರುಗಿಸಬೇಕು.

ಶ್ರೀ ಕೆ.ಜೆ.ಜಾರ್ಜ್(ಗೃಹ ಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್, ಬೋಪಯ್ಯ ಮತ್ತು ಸವದಿಯವರು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಮುಖ್ಯವಾಗಿ Non-Governmental Organization (NGOs) ಅದು foreign exchange fund

ಬರುತ್ತದೆಂದರೆ ಅದು ಕೇಂದ್ರ ಸರ್ಕಾರಕ್ಕೆ ಬರುತ್ತದೆ. ಈಗಾಗಲೇ ಸಾಕಷ್ಟು ಪತ್ರಿಕೆಗಳಲ್ಲಿಯೂ ಬಂದಿದೆ, ಕೇಂದ್ರ ಸರ್ಕಾರದವರೂ ಇವರ ವಿಚಾರದಲ್ಲಿ ವಿಚಾರಣೆ ಮಾಡುತ್ತಿದ್ದಾರೆ. ನಾನು ಎಲ್ಲಾ ಎನ್.ಜಿ.ಒಗಳು ಸರಿ ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ, ಒಳ್ಳೆಯ ಕೆಲಸ ಮಾಡುತ್ತಿರುವ ಕೆಲವೊಂದು ಎನ್.ಜಿ.ಒಗಳೂ ಕೂಡ ಇದ್ದಾರೆ, ಆದರೆ ಕೆಲವರು ಬೋಗಸ್, ಹಣ ತೆಗೆದುಕೊಂಡು ಅದನ್ನು ಯಾವುದೊ ರೀತಿಯಲ್ಲಿ ಬಳಸಿಕೊಳ್ಳುವುದು ಅಥವಾ ಭ್ರಷ್ಟಾಚಾರ ಮಾಡುವುದು ಈ ತರಹ ಮಾಡುತ್ತಿದ್ದಾರೆ. ಈಗ ನಮ್ಮ ರಾಜ್ಯದ ಮಟ್ಟದಲ್ಲಿ ಹೇಳುವುದಾದರೆ, ನಮ್ಮಲ್ಲಿ I.S.D ಎಂದು ಒಂದು ಪೊಲೀಸ್ ವಿಂಗ್ ಇದೆ, Internal Security Division ಅವರ ಕೆಲಸ, ಇಂಥದ್ದೇನಾದರೂ ಇದ್ದರೆ ಪತ್ತೆ ಹಚ್ಚುವುದಕ್ಕೆ ನಾವು ಅವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ, ಅವರಿಗೆ Police Station ಬೇರೆ ಕೊಟ್ಟಿದ್ದೇವೆ, ಅದರಲ್ಲಿ ಒಬ್ಬ A.D.G.P. ಇದ್ದಾರೆ. ನಾವು ಅವರಿಗೆ ಹೇಳಿ, ನಮ್ಮ ರಾಜ್ಯದಲ್ಲಿ ಯಾವ್ಯಾವ ಎನ್.ಜಿ.ಒ ಗಳು ನೋಂದಣಿಯಾಗಿವೆ, ಅವರಿಗೆ ಎಷ್ಟು ಹಣ ಬಂದಿದೆ? ಈಗ ಸುಮಾರು 1069 ಕೋಟಿ ಬಂದಿದೆ ಎಂದು ಹೇಳಿದ್ದಾರೆ. ಆ ವಿಚಾರವನ್ನು ತೆಗೆದು ಕೊಂಡು ಸಂಪೂರ್ಣವಾಗಿ ವಿಚಾರಣೆ ನಡೆಸಿ, ತನಿಖೆ ನಡೆಸಿ ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದಿಂದ ನಾನು ಆದೇಶ ಕೊಡುತ್ತೇನೆ. ರಮೇಶ್ ಕುಮಾರ್ ಅವರು ಮತ್ತೊಂದು ವಿಚಾರವನ್ನು ಹೇಳಿದರು, ಒಂದು ಸಂಘ, ಇನ್.ಜಿ.ಒ ವಿಚಾರದಲ್ಲಿ ಇದೇ ತರಹ ಒಂದು ಪತ್ರವನ್ನು ಬರೆದಿದ್ದರು, ಈಗಾಗಲೇ Enforcement Directorateಗೆ ನಮ್ಮ ಸರ್ಕಾರದಿಂದ ತನಿಖೆ ಮಾಡಿ ಅವರ ಮೇಲೆ ಕಾನೂನು ರೀತ್ಯಾ ಕ್ರಮ ತೆಗೆದು ಕೊಳ್ಳುವುದಕ್ಕೆ ಬರೆದಿದ್ದೇವೆ, ಅದೇ ರೀತಿಯಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ರೀತಿಯ ಸಂಸ್ಥೆಗಳು ಎಷ್ಟಿವೆ? ಯಾರ್ಯಾರು? ಅಂಥವರ ಪಟ್ಟಿ ಇದ್ದರೆ ಒದಗಿಸಿ, ಅವರಿಂದ ಏನೇನು ಹಣ ಸ್ವೀಕಾರವಾಗಿವೆ? ಏಕೆಂದರೆ ಅವರಿಂದ Accountant General ರವರು ದಾಖಲೆಗಳು ಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ಆ ಎಲ್ಲಾ ಮಾಹಿತಿಯನ್ನು ಪಡೆದು ಸದನಕ್ಕೆ ಸಲ್ಲಿಸುವಂಥ ಕೆಲಸವನ್ನು ಮಾಡಿ.

ಶ್ರೀ ಕೆ.ಜೆ.ಜಾರ್ಜ್(ಮಾನ್ಯ ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ ನಮ್ಮ ಇಡೀ ಕರ್ನಾಟಕ ರಾಜ್ಯದಲ್ಲಿ ಯಾವ್ಯಾವ NGOs ಇವೆ. ಎಷ್ಟು register ಆಗಿವೆ, ಎಷ್ಟು ದುಡ್ಡು ಬಂದಿವೆ, ಯಾವ ರೀತಿಯಲ್ಲಿ ಹಣ ವಿನಿಯೋಗವಾಗಿದೆ ಅದರ ವಿಚಾರದಲ್ಲಿ ಸಂಪೂರ್ಣವಾದ ಮಾಹಿತಿಯನ್ನು ತಂದು ಮುಂದೆ ಬರುವ ದಿವಸಗಳಲ್ಲಿ ಏಕೆಂದರೆ ಅದನ್ನು investigate ಮಾಡಲಿಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಬಹುಶಃ ಈ ಸದನದಲ್ಲಿ ಕೊಡಲಿಕ್ಕಾಗದೆ ಹೋದರೆ ಮತ್ತೊಂದು ಬಾರಿ ಸದನ ಸೇರುವಾಗ ಸಂಪೂರ್ಣವಾದ ತನಿಖೆಯನ್ನು ಮಾಡಿ ಅದರ ಬಗ್ಗೆ ವರದಿಯನ್ನು ಕೊಡುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಸಮಯ, ಶ್ರೀಮಾನ್ ಲೋಬೋ,

4. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಅಧ್ಯಕ್ಷರೆ ಇದೊಂದು ಗಂಭೀರವಾದ ವಿಷಯವಿತ್ತು, ಬೆಳಗಾವಿಯಲ್ಲಿ ನಡೆದ ಘಟನೆ. ಇಲ್ಲಿಯವರೆಗೆ ಎಲ್ಲ ವಕೀಲರ ಶಾಸಕರ ಮನೆ ಮುಂದೆ ಹೋಗಿ ಉಪವಾಸ ಕುಳಿತಿದ್ದಾರೆ.

ಅಧ್ಯಕ್ಷರು : ಸಚಿವರು ಇಲ್ಲ, ಕರೆಸುತ್ತೇನೆ, ಲೋಬೋ ಕೇಳಿ.

196; ಬಂಡವಾಳ ಹೂಡಿಕೆ

ಶ್ರೀ ಲೋಬೋ ಜೆ.ಆರ್.(ಮಂಗಳೂರು ನಗರ ದಕ್ಷಿಣ)

ಅ) ಮಾಹಿತಿ ತಂತ್ರಜ್ಞಾನದಲ್ಲಿ ಬೆಂಗಳೂರು ನಗರವು ವಿಶ್ವದಲ್ಲೇ ಪ್ರಖ್ಯಾತಿಯಾಗಿರುವುದು ನಿಜವೇ;

ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಬೆಂಗಳೂರು ಅಲ್ಲದೇ ಯಾವ ಯಾವ ನಗರಗಳನ್ನು ಮಾಹಿತಿ ತಂತ್ರಜ್ಞಾನದ ಬಂಡವಾಳ ಹೂಡಿಕೆಗೆ ಆಯ್ದು ಕೊಳ್ಳಲಾಗಿದೆ;